**ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಮುಖ್ಯಸ್ಥರು, ಅರಣ್ಯ ಪಡೆ) ಬೆಂಗಳೂರು**
**ಇವರ ಕಚೇರಿ ಆದೇಶದ ಉದ್ದರಣ**

ಕಚೇರಿ ಆದೇಶ ಸಂಖ್ಯೆ: 114/2014-15 ದಿನಾಂಕ: 09-3-2015

ವಿಷಯ: 2012-13ನೇ ಸಾಲಿನಲ್ಲಿ ವಲಯ ಅರಣ್ಯಾಧಿಕಾರಿ ಹುದ್ದೆಗೆ ಆಯ್ಕೆಯಾದ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡುವ ಬಗ್ಗೆ.

ಉಲ್ಲೇಖ:
1) ಸರ್ಕಾರದ ಅಧಿಸೂಚನೆ ಸಂಖ್ಯೆ: ಎಫ್‌ಇಇ 366 ಎಫ್‌ಎನ್‌ಜಿ 2010 ದಿನಾಂಕ 06-09-2012.
2) ಸರ್ಕಾರದ ಪತ್ರ ಸಂಖ್ಯೆ ಅಪಜೀ 172 ಅಅಸೇ 2007 ದಿನಾಂಕ 12-06-2009.
3) ಈ ಕಛೇರಿಯ ಅಧಿಸೂಚನೆ ಸಂಖ್ಯೆ: ಬಿ9-ವಅಅ-ವಿವ-1/2012-13 ದಿನಾಂಕ 12-09-2012.
4) ಈ ಕಛೇರಿಯ ಪ್ರಕಟಣೆ ಸಂಖ್ಯೆ: ಬಿ9-ವಅಅ-ವಿವ-1/2012-13 ದಿನಾಂಕ 01-09-2014.

-0-

**ಪ್ರಸ್ತಾವನೆ:**

ಉಲ್ಲೇಖ (2) ರಲ್ಲಿ ಹೇಳಿರುವ ಸರ್ಕಾರದ ಪತ್ರದಲ್ಲಿ 125 ವಲಯ ಅರಣ್ಯಾಧಿಕಾರಿ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಸರ್ಕಾರವು ಅನುಮತಿ ನೀಡಿದೆ. 2013-14ನೇ ಸಾಲಿನಲ್ಲಿ ಉಳಿದ 62 ವಲಯ ಅರಣ್ಯಾಧಿಕಾರಿ ಹುದ್ದೆಗಳಿಗೆ ನೇರ ನೇಮಕಾತಿ ಪ್ರಕ್ರಿಯೆಯನ್ನು ಮುಗಿಸಿ ಉಲ್ಲೇಖ (4) ರಲ್ಲಿ ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗಿರುತ್ತದೆ.

ಈ ಕೆಳಗೆ ತೋರಿಸಿರುವ ಎಲ್ಲಾ ಅಭ್ಯರ್ಥಿಗಳ ಸಂಬಂಧಿಸಿದ ಜಾತಿ ಪ್ರಮಾಣ ಪತ್ರಗಳ ಸಿಂಧುತ್ವ, ಪೊಲೀಸ್ ತಪಾಸಣಾ ವರದಿ, ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಮತ್ತು ಗ್ರಾಮೀಣ ಪ್ರದೇಶದಲ್ಲಿ ವ್ಯಾಸಂಗ ಮಾಡಿದ ಪ್ರಮಾಣ ಪತ್ರಗಳ ಸಿಂಧುತ್ವವು ದೊರಕಿರುತ್ತದೆ.

ಹೀಗಾಗಿ ಉಲ್ಲೇಖ (1) ರಲ್ಲಿ ಹೇಳಿದ ಕರ್ನಾಟಕ ಅರಣ್ಯ ಇಲಾಖೆ ವೃಂದ ಮತ್ತು ನೇಮಕಾತಿ ನಿಯಾಮಾವಳಿಯ ನಿಯಮಗಳಂತೆ ನೇರ ನೇಮಕಾತಿಯಲ್ಲಿ ಆಯ್ಕೆಗೊಂಡಿರುವ ವಲಯ ಅರಣ್ಯಾಧಿಕಾರಿಗಳಿಗೆ ಮೂರು ವರ್ಷಗಳ ಪರೀಕ್ಷಾರ್ಥ ಅವಧಿಯ ಮೇಲೆ ನೇಮಕ ಮಾಡಿ ಈ ಪರೀಕ್ಷಾರ್ಥ ಅವಧಿಯಲ್ಲಿ 1½ ವರ್ಷದ ವೃತ್ತಿ ತರಬೇತಿಯನ್ನು ಮತ್ತು 6 ತಿಂಗಳ ವೃತ್ತಿ ತರಬೇತಿಯನ್ನು ಪಡೆಯಬೇಕಾಗಿರುತ್ತದೆ ಮತ್ತು ಈ ವಲಯ ಅರಣ್ಯಾಧಿಕಾರಿಗಳು ಒಂದು ವರ್ಷದ ಕಾಲ ಸ್ವತಂತ್ರವಾಗಿ ವಲಯ ಅರಣ್ಯಾಧಿಕಾರಿ ಹುದ್ದೆಯನ್ನು ನಿರ್ವಹಿಸಬೇಕಾಗಿರುತ್ತದೆ. ಆದುದರಿಂದ ಈ ಕೆಳಕಂಡ ಆದೇಶ.

<u>ಆ ದೇ ಶ</u>

ಪ್ರಸ್ತಾವನೆಯಲ್ಲಿ ವಿವರಿಸಿದ ಕಾರಣಗಳಿಗಾಗಿ, ವಲಯ ಅರಣ್ಯಾಧಿಕಾರಿ ಹುದ್ದೆಗೆ ಆಯ್ಕೆಗೊಂಡ ಹಾಗೂ ಎಲ್ಲಾ ಪೂರಕ ದಾಖಲೆಗಳು ಲಭ್ಯವಾದ ಈ ಕೆಳಕಂಡ ಅಭ್ಯರ್ಥಿಗಳನ್ನು ಮೂರು ವರ್ಷಗಳ

ಪರೀಕ್ಷಾರ್ಥ ಅವಧಿಯ ಮೇಲೆ ವಲಯ ಅರಣ್ಯಾಧಿಕಾರಿ ಹುದ್ದೆಗೆ ನೇಮಿಸಿ, ವೇತನ ಶ್ರೇಣಿ ರೂ.21600–600–24600–700–28800–800–33600–900–39000–1050–40050 ರಲ್ಲಿ ಅವರ ಹೆಸರಿನ ಎದುರಿಗೆ ತೋರಿಸಿರುವ ಖಾಲಿ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸುವಂತೆ ಸೂಚಿಸಿ ನೇಮಕ ಮಾಡಿದೆ. ಈ ಆದೇಶವು ಈ ತಕ್ಷಣದಿಂದ ಜಾರಿಗೆ ಬರುತ್ತದೆ.

| ಕ್ರ. ಸಂ. | ಅಭ್ಯರ್ಥಿಯ ಹೆಸರು ಶ್ರೀಯುತ/ಕುಮಾರಿ | ಹುಟ್ಟಿದ ದಿನಾಂಕ | ಪ್ರವರ್ಗ | ನಿವಾಸಿ ಜಿಲ್ಲೆ | ನೇಮಕ ಮಾಡಿದ ಹುದ್ದೆಯ ಹೆಸರು |
|---|---|---|---|---|---|
| 1 | ಕಿಶೋರ ನಾಯ್ಕ ಬಿ. | 30–07–1984 | ಪ.ಜಾ. | ಶಿವಮೊಗ್ಗ | ಎನ್‌ಆರ್‌ಪಿ ಹುಣಸೂರು |
| 2 | ಸಂತೋಷ್ ಸುಂಬಳ್ಳಿ | 06–08–1986 | 3ಬಿ | ಬೆಳಗಾವಿ | ತರಬೇತಿ ಶಾಲೆ, ತಟ್ಟಿಹಳ್ಳ |
| 3 | ಗಂಗಾಧರ | 01–05–1987 | ಪ.ಜಾ. | ದಾವಣಗೆರೆ | ಸಾಮಾಜಿಕ ಅರಣ್ಯ ವಲಯ, ಬಳ್ಳಾರಿ |
| 4 | ಮಹೇಶ್ ಮಾರೆಣ್ಣಾವರ್ | 30–11–1986 | 2ಎ | ಬಾಗಲಕೋಟೆ | ಸಾಮಾಜಿಕ ಅರಣ್ಯ ವಲಯ, ಸವದತ್ತಿ |
| 5 | ವೀರೇಂದ್ರ ಮರಿಬಸಣ್ಣವರ್ | 23–07–1990 | 2ಎ | ಗದಗ | ಸಾಮಾಜಿಕ ಅರಣ್ಯ ವಲಯ, ಔರಾದ |
| 6 | ಸಯ್ಯದ್‌ಸಾಬ್ ನಡಾಫ್ | 04–04–1986 | 2ಬಿ | ಬಾಗಲಕೋಟೆ | ಕಾರ್ಯಯೋಜನೆ, ಬಳ್ಳಾರಿ |
| 7 | ಅಜಯ್ ಹೊನ್ನಪ್ಪ ನಾಯ್ಕ | 10–06–1988 | 2ಎ | ಉತ್ತರ ಕನ್ನಡ | ಸರ್ವೆ, ಬೆಳಗಾವಿ |
| 8 | ನಿವೇದಿತಾ ಎಂ. | 28–09–1987 | ಪ.ಜಾ. | ಮೈಸೂರು | ಕಾರ್ಯಯೋಜನೆ, ಶಿವಮೊಗ್ಗ |
| 9 | ಸುಜಾತಾ ವಿ.ಎನ್. | 09–05–1990 | ಪ.ಜಾ. | ತುಮಕೂರು | ಸರ್ಕಾರಿ ಮರ ಸಂಗ್ರಹಾಲಯ, ಕಡೂರು |
| 10 | ನಿವೇದಿತಾ ಟಿ. ಪಿ. | 17–03–1990 | 3ಬಿ | ಶಿವಮೊಗ್ಗ | ಐಸಿಟಿ, ಬೆಂಗಳೂರು |
| 11 | ರಮೇಶ್ ವೆಂಕಪ್ಪ ಗಾಣಿಗೇರ್ | 26–05–1987 | 2ಎ | ಬೆಳಗಾವಿ | ಅಟಲ್ ಬಿಹಾರಿ ವಾಜಪೇಯಿ ಉದ್ಯಾನವನ, ಕವಲಾಪುರ |
| 12 | ವಿವೇಕ್ ಎಸ್. | 28–04–1991 | ಪ.ಜಾ. | ಶಿವಮೊಗ್ಗ | ಅರಣ್ಯ ಸಂಚಾರಿ ದಳ, ಮೈಸೂರು |
| 13 | ರಾಘವೇಂದ್ರ ಎಂ. ಅಗಸೆ | 30–07–1990 | 2ಎ | ಉತ್ತರ ಕನ್ನಡ | ಕಾರ್ಯಯೋಜನೆ ಮತ್ತು ಭೂಮಾಪನ, ಚಿಕ್ಕಮಗಳೂರು |
| 14 | ಶಿಲ್ಪ ನಾಯ್ಕ | 18–08–1990 | 2ಎ | ಉತ್ತರ ಕನ್ನಡ | ಸರ್ಕಾರಿ ಮರ ಸಂಗ್ರಹಾಲಯ, ಕಿರುವತ್ತಿ |

| ಕ್ರ. ಸಂ. | ಅಭ್ಯರ್ಥಿಯ ಹೆಸರು ಶ್ರೀಯುತ/ಕುಮಾರಿ | ಹುಟ್ಟಿದ ದಿನಾಂಕ | ಪ್ರವರ್ಗ | ನಿವಾಸಿ ಜಿಲ್ಲೆ | ನೇಮಕ ಮಾಡಿದ ಹುದ್ದೆಯ ಹೆಸರು |
|---|---|---|---|---|---|
| 15 | ಗೀತಾ ಚವ್ಹಾಣ್ | 30-06-1984 | ಪ.ಜಾ. | ಬಿಜಾಪುರ | ಸಾಮಾಜಿಕ ಅರಣ್ಯ ವಲಯ, ದೇವದುರ್ಗ |
| 16 | ರತನ್ ಕುಮಾರ್ ಎಂ. ಎ. | 30-05-1986 | 3ಎ | ಮೈಸೂರು | ಅರಣ್ಯ ಸಂಚಾರಿ ದಳ, ಹುಣಸೂರು |
| 17 | ಅಮೃತ್ ಜಿನ್ನಪ್ಪ ಗಂಡೋಶಿ | 08-07-1987 | 3ಬಿ | ಬೆಳಗಾವಿ | ಸಾಮಾಜಿಕ ಅರಣ್ಯ ವಲಯ, ಚಿಂಚೋಳಿ |
| 18 | ಶಂಕರ್ ಅಂತರಗಟ್ಟಿ | 01-06-1987 | ಪ್ರವರ್ಗ-1 | ಬೆಳಗಾವಿ | ಸೀಬರ್ಡ್, ಕಾರವಾರ |
| 19 | ಶಾಂತಪ್ಪ ಪೂಜಾರ್ | 01-06-1988 | ಪ.ಜಾ. | ಹಾವೇರಿ | ಸಾಮಾಜಿಕ ಅರಣ್ಯ ವಲಯ, ಹೂವಿನಹಡಗಲಿ |
| 20 | ವಿದ್ಯಾಭಾರತಿ ಬಿ.ಪಿ. | 24-03-1986 | 3ಬಿ | ಮೈಸೂರು | ಸಾಮಾಜಿಕ ಅರಣ್ಯ ವಲಯ, ಕೆ.ಆರ್. ಪೇಟೆ |
| 21 | ರವಿಕೀರ್ತಿ ಕೆ. ಎನ್. | 09-11-1986 | ಪ.ಜಾ. | ಕೋಲಾರ | ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ, ಬೆಂಗಳೂರು |
| 22 | ಶ್ರೀಲಕ್ಷ್ಮಿ ಹೆಚ್. ಎಸ್. | 20-01-1985 | 2ಎ | ಬೆಂಗಳೂರು ಗ್ರಾಮಾಂತರ | ಸಾಮಾಜಿಕ ಅರಣ್ಯ ವಲಯ, ದೊಡ್ಡಬಳ್ಳಾಪುರ |

ಶ್ರೀ ಶಂಕರ್ ಅಂತರಗಟ್ಟಿ ಇವರ ವಿರುದ್ಧ ದಾಖಲಾಗಿರುವ ಕೆ.ಎ.ಟಿ. ಅರ್ಜಿ ಸಂಖ್ಯೆ: 7836/2014 ಈ ಪ್ರಕರಣವು ಪ್ರಸ್ತುತ ಕರ್ನಾಟಕ ಆಡಳಿತ ನ್ಯಾಯಮಂಡಳಿಯಲ್ಲಿ ವಿಚಾರಣಾ ಹಂತದಲ್ಲಿರುತ್ತದೆ. ಶ್ರೀ ಶಂಕರ್ ಅಂತರಗಟ್ಟಿ ಇವರಿಗೆ ನೀಡಲಾಗಿರುವ ನೇಮಕಾತಿಯು ಈ ಕೆ.ಎ.ಟಿ. ಅರ್ಜಿಯ ಅಂತಿಮ ತೀರ್ಮಾನಕ್ಕೆ ಒಳಪಟ್ಟಿರುತ್ತವೆ.

<u>ಸೂಚನೆಗಳು</u>:-

1. ಮೇಲೆ ಹೇಳಿದ ಎಲ್ಲಾ ಪರೀಕ್ಷಾರ್ಥ ವಲಯ ಅರಣ್ಯಾಧಿಕಾರಿಗಳು ತಮಗೆ ನೇಮಿಸಿದ ಹುದ್ದೆಗಳಲ್ಲಿ ಈ ಆದೇಶ ಹೊರಡಿಸಿದ 15 ದಿನಗಳೊಳಗೆ ತಪ್ಪದೇ ಕರ್ತವ್ಯಕ್ಕೆ ಹಾಜರಾಗತಕ್ಕದು. ಈ ವಲಯ ಅರಣ್ಯಾಧಿಕಾರಿಗಳಿಗೆ <u>ದಿನಾಂಕ 21-4-2015 ರಿಂದ 1½ ವರ್ಷದ ವೃತ್ತಿ ತರಬೇತಿಯನ್ನು ಆಂಧ್ರಪ್ರದೇಶ ಫಾರೆಸ್ಟ್ ಅಕಾಡಮಿ, ಡುಲಪಳ್ಳಿ, ಹೈದರಾಬಾದ್, ತೆಲಂಗಾಣ</u> ಕಾಲೇಜಿನಲ್ಲಿ ನೀಡಲಾಗುವುದು. ತದನಂತರ ಅವರುಗಳು 6 ತಿಂಗಳ ವೃತ್ತಿ ತರಬೇತಿಯನ್ನು ಪಡೆಯಬೇಕಾಗಿರುತ್ತದೆ. ಹೀಗಾಗಿ ಸಂಬಂಧಿಸಿದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ/ನಿಯಂತ್ರಣಾಧಿಕಾರಿಗಳು ಸದರಿ ವಲಯ ಅರಣ್ಯಾಧಿಕಾರಿಗಳನ್ನು ದಿನಾಂಕ 15-04-2015 ರಂದು ಇವರುಗಳನ್ನು ವೃತ್ತಿ ತರಬೇತಿಗೆ ಹಾಜರಾಗುವ ಕುರಿತು ಸೂಕ್ತ ನಿರ್ದೇಶನ ನೀಡಿ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಕರ್ತವ್ಯದಿಂದ ಕಾರ್ಯವಿಮುಕ್ತಿಗೊಳಿಸಲು ಕ್ರಮ ಕೈಗೊಳ್ಳುವಂತೆ ತಿಳಿಸಿದೆ ಹಾಗೂ ಇವರು ಕರ್ತವ್ಯ ನಿರ್ವಹಿಸುತ್ತಿರುವ ವಲಯದ ಕಾರ್ಯಭಾರವನ್ನು ನಿರ್ವಹಿಸಲು ಸೂಕ್ತ ಬದಲಿ ವ್ಯವಸ್ಥೆ ಮಾಲು ತಿಳಿಸಿದೆ.

2. ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ–ಎಸ್‌ಪಿಎಲ್–04–ಪಿಇಟಿ–2005 ದಿನಾಂಕ 31–3–2006 ರಂತೆ ಅಂಶದಾಯಿ ನಿವೃತ್ತಿ ಯೋಜನೆ (Contributory Pension Scheme) ಗೆ ಈ ನೇಮಕಾತಿಯಲ್ಲಿ ಆಯ್ಕೆಯಾದ ವಲಯ ಅರಣ್ಯಾಧಿಕಾರಿಗಳು ಬದ್ಧರಾಗಿರತಕ್ಕದ್ದು.

3. ಪರೀಕ್ಷಾರ್ಥ ವಲಯ ಅರಣ್ಯಾಧಿಕಾರಿಗಳ ಸೇವಾ ವಹಿಯನ್ನು ಸಂಬಂಧಪಟ್ಟ ಉಪ ಅರಣ್ಯ ಸಂರಕ್ಷಣಾಧಿಕಾರಿ/ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಕೂಡಲೇ ತೆರೆದು ಕಾಲಕಾಲಕ್ಕೆ ಅವರ ಸೇವಾ ವಿವರಗಳನ್ನು ಹಾಗೂ ತರಬೇತಿ ವಿವರಗಳನ್ನು ದಾಖಲಿಸುವುದು.

4. ಪರೀಕ್ಷಾರ್ಥ ವಲಯ ಅರಣ್ಯಾಧಿಕಾರಿಗಳು ವೃತ್ತಿ ತರಬೇತಿ ಅವಧಿಯಲ್ಲಿ ಅವರುಗಳಿಗೆ ವೇತನ ಹಾಗೂ ಇತರೆ ಭತ್ಯೆಗಳನ್ನು ಪಾವತಿಸತಕ್ಕದ್ದು.

5. ವೃತ್ತಿ ತರಬೇತಿ ಅವಧಿ ಹಾಗೂ ಪರೀಕ್ಷಾರ್ಥ ಅವಧಿಯಲ್ಲಿ ಪರೀಕ್ಷಾರ್ಥ ವಲಯ ಅರಣ್ಯಾಧಿಕಾರಿಗಳ ಸೇವೆಯು ತೃಪ್ತಿಕರವಾಗಿಲ್ಲದಿದ್ದಲ್ಲಿ, ಕರ್ನಾಟಕ ಅರಣ್ಯ ಸೇವೆಗಳು (ನೇಮಕಾತಿ) ನಿಯಮಗಳು 2003 ಹಾಗೂ ಪರೀಕ್ಷಾರ್ಥ ನಿಯಮಗಳ ಪ್ರಕಾರ ಅವರನ್ನು ನಿಯಾಮಾನುಸಾರ ಸೇವೆಯಿಂದ ತೆಗೆದುಹಾಕಲಾಗುವುದು.

6. ಪರೀಕ್ಷಾರ್ಥ ವಲಯ ಅರಣ್ಯ ಅಧಿಕಾರಿಗಳು ವಲಯ ಅರಣ್ಯ ಅಧಿಕಾರಿ ಹುದ್ದೆಗೆ ನಿಗದಿಪಡಿಸಲಾದ ಎಲ್ಲಾ ಇಲಾಖಾ ಪರೀಕ್ಷೆಗಳನ್ನು ಪರೀಕ್ಷಾರ್ಥ ಅವಧಿಯಲ್ಲಿ ಉತ್ತೀರ್ಣರಾಗಿರಬೇಕು.

7. ಪರೀಕ್ಷಾರ್ಥ ವಲಯ ಅರಣ್ಯಾಧಿಕಾರಿಗಳು ಕಡ್ಡಾಯವಾಗಿ 5 ವರ್ಷಗಳ ಸೇವೆಯನ್ನು ಅರಣ್ಯ ಇಲಾಖೆಯಲ್ಲಿ ಪೂರ್ಣಗೊಳಿಸಬೇಕು. ಒಂದು ವೇಳೆ 5 ವರ್ಷದ ಮೊದಲೇ ಹುದ್ದೆಯನ್ನು ತ್ಯಜಿಸಿದಲ್ಲಿ ಅಥವಾ ಯಾವುದೇ ಕಾರಣಕ್ಕೆ ಅವರನ್ನು ಹುದ್ದೆಯಿಂದ ತೆಗೆದು ಹಾಕಿದಲ್ಲಿ ಪರೀಕ್ಷಾರ್ಥ ವಲಯ ಅರಣ್ಯ ಅಧಿಕಾರಿಗಳು ತರಬೇತಿ ಪೂರ್ವ ಇಲಾಖೆಗೆ ಸಲ್ಲಿಸಿರುವ ನಷ್ಟಬಂಧಿ ಪತ್ರದಲ್ಲಿನ ಷರತ್ತಿನ ಪ್ರಕಾರ (Indemnity Bond) ಇವರಿಗೆ ವಲಯ ಅರಣ್ಯಾಧಿಕಾರಿ ಹುದ್ದೆಯ ತರಬೇತಿ ನೀಡಲು ಸರ್ಕಾರವು ವೆಚ್ಚ ಮಾಡಿದ ಹಣವನ್ನು ಬಡ್ಡಿ ಸಹಿತ ಅವರಿಂದ ವಸೂಲು ಮಾಡಲಾಗುವುದು.

8. ತರಬೇತಿಯ ಅವಧಿಯಲ್ಲಿ ಸರ್ಕಾರವು ಪರೀಕ್ಷಾರ್ಥ ವಲಯ ಅರಣ್ಯಾಧಿಕಾರಿಗಳಿಗೆ ರೂ.40,000–00 ಗಳನ್ನು ಸಾಧನ ಸಾಮಗ್ರಿ ವೆಚ್ಚಗಳಿಗಾಗಿ ನೀಡಿದ್ದು, ಸದರಿ ಹಣದಲ್ಲಿ ಶೇಕಡಾ 50 ರಷ್ಟು ಹಣವನ್ನು ಅಂದರೆ ರೂ. 20,000–00 ಗಳನ್ನು ಅವರು ಹಿಂದಿರುಗಿಸಬೇಕಾಗಿರುತ್ತದೆ. ಅದುದರಿಂದ ಸಂಬಂಧಪಟ್ಟ ವೇತನ ಬಟವಾಡೆ ಅಧಿಕಾರಿ (ಡಿ.ಡಿ.ಓ.) ಮೇಲಿನ ಮೊತ್ತವನ್ನು 10 ಕಂತುಗಳಲ್ಲಿ ತಿಂಗಳಿಗೆ ರೂ. 2,000–00 ರಂತೆ ಪರೀಕ್ಷಾರ್ಥ ವಲಯ ಅರಣ್ಯಾಧಿಕಾರಿಗಳ ಮೊದಲನೇ ತಿಂಗಳ ವೇತನದಿಂದಲೇ ಕಡಿತಗೊಳಿಸಿ ಸರ್ಕಾರಕ್ಕೆ ಜಮಾ ಮಾಡುವುದು ಹಾಗೂ ಈ ಕಚೇರಿಗೆ ಮಾಹಿತಿ ನೀಡುವುದು.

9. ಈ ಆದೇಶದಲ್ಲಿ ಪರೀಕ್ಷಾರ್ಥ ವಲಯ ಅರಣ್ಯಾಧಿಕಾರಿಗಳಿಗೆ ನೀಡಿರುವ ಕ್ರಮಾಂಕವು ವಲಯ ಅರಣ್ಯ ಅಧಿಕಾರಿ ವೃಂದದ ಜೇಷ್ಠತಾ ಕ್ರಮಾಂಕದ ನಿಗದಿಗೆ ಅನ್ವಯವಾಗುವುದಿಲ್ಲ. ವಲಯ ಅರಣ್ಯಾಧಿಕಾರಿ ವೃಂದದಲ್ಲಿ ಜೇಷ್ಠತಾ ಕ್ರಮಾಂಕವನ್ನು ನಿಯಾಮಾನುಸಾರ ಪ್ರತ್ಯೇಕವಾಗಿ ನಿಗದಿಪಡಿಸಲಾಗುವುದು.

10. ಕರ್ನಾಟಕ ಅರಣ್ಯ ಲೆಕ್ಕ ಸಂಹಿತೆ ನಿಯಮ 20ರ ಪ್ರಕಾರ ನೇರ ನೇಮಕಾತಿಯಿಂದ ಆಯ್ಕೆಯಾಗುವ ವಲಯ ಅರಣ್ಯಾಧಿಕಾರಿಗಳಿಂದ ಒಂದು ವರ್ಷದ ವೇತನವನ್ನು ಭದ್ರತಾ ಠೇವಣಿಯನ್ನಾಗಿ ವಸೂಲು ಮಾಡಬೇಕಾಗಿರುತ್ತದೆ. ಆದ್ದರಿಂದ ಸಂಬಂಧಪಟ್ಟ ವೇತನ ಬಟವಡೆ ಅಧಿಕಾರಿ (ಡಿ.ಡಿ.ಓ) ಮೇಲಿನ ಪರೀಕ್ಷಾರ್ಥ ವಲಯ ಅರಣ್ಯಾಧಿಕಾರಿಗಳಿಂದ ಈ ಕೆಳಕಂಡಂತೆ ಒಂದು ವರ್ಷದ ಮೂಲವೇತನವನ್ನು ಭದ್ರತಾ ಠೇವಣಿಯನ್ನಾಗಿ ವಸೂಲು ಮಾಡುವುದು.

ಅ. ಒಂದು ವರ್ಷ ಮೂಲ ವೇತನದ ಶೇ. 25ರ ಭಾಗದಲ್ಲಿ ಶೇಕಡಾ 6¼ ಭಾಗವನ್ನು ಮೊದಲ ತಿಂಗಳ ವೇತನದಲ್ಲಿ ನಗದಾಗಿ ವಸೂಲು ಮಾಡಿ ಭದ್ರತಾ ಠೇವಣಿಯನ್ನಾಗಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಮುಖ್ಯಸ್ಥರು, ಅರಣ್ಯ ಪಡೆ), ಬೆಂಗಳೂರು ಎಂಬ ಪದನಾಮದಲ್ಲಿ ಇಡುವುದು.

ಆ. ಉಳಿದ ಶೇಕಡಾ 18¾ ಭಾಗವನ್ನು ಮೂಲ ವೇತನದ ಶೇಕಡಾ 10 ರಷ್ಟು ಮೊತ್ತವನ್ನು ಪ್ರತಿ ತಿಂಗಳ ವೇತನದಲ್ಲಿ ಕಡಿತಗೊಳಿಸಿ ವಸೂಲಿ ಮಾಡುವುದು. ಹೀಗೆ ಮಾಡುವುದರಿಂದ ಒಟ್ಟು ಒಂದು ವರ್ಷ ಮೂಲವೇತನದ ಶೇಕಡಾ 25 ರಷ್ಟು ಭಾಗವನ್ನು ವಸೂಲಿ ಮಾಡಿದಂತಾಗುವುದು.

ಇ. ಉಳಿದ ಶೇಕಡಾ 75 ರಷ್ಟು ಭಾಗವನ್ನು ನೌಕರರ ಇಚ್ಛಾನುಸಾರ ನಗದಾಗಿ ಇಲ್ಲವೇ ಕರ್ನಾಟಕ ಆರ್ಥಿಕ ಸಂಹಿತೆ 1958ರ ನಿಯಮ 353 ರಿಂದ 359 ರಲ್ಲಿ ತಿಳಿಸಿರುವ ಪ್ರಕಾರ ವಸೂಲಿ ಮಾಡುವುದು.

**ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ**
**(ಮುಖ್ಯಸ್ಥರು, ಅರಣ್ಯ ಪಡೆ)**
**ಹಾಗೂ ನೇಮಕಾತಿ ಪ್ರಾಧಿಕಾರ.**

**ಸಂಖ್ಯೆ : ಬಿ1–ವಲಅ–ವಿವ–1/2012–13**

ಸಂಬಂಧಿಸಿದ ಎಲ್ಲಾ ಪರೀಕ್ಷಾರ್ಥ ವಲಯ ಅರಣ್ಯಾಧಿಕಾರಿಗಳಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.

ಪ್ರತಿಯನ್ನು:–

1. ಗೌರವಗಳೊಂದಿಗೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ಬೆಂಗಳೂರು.
3. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮ ನಿಯಮಿತ / ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ, ವನವಿಕಾಸ, ಬೆಂಗಳೂರು.
4. ಎಲ್ಲಾ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ.
5. ಎಲ್ಲಾ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ.
6. ಎಲ್ಲಾ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ.
7. ಎಲ್ಲಾ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು.
8. ಕಚೇರಿ ಆದೇಶದ ಕಡತಕ್ಕೆ.
9. ಈ ಕಚೇರಿಯ ಬಿ1 ಶಾಖೆಗೆ.